ಅರಣ್ಯ ಪ್ರದೇಶದಲ್ಲಿ ವೀರಪ್ಪನ್ ಇರಬಹುದಾಗಿರುವುದರಿಂದ ಮತ್ತು ಹೆಚ್ಚಿನ ಅಂಶ ಅವನು ನೆರೆರಾಜ್ಯದಲ್ಲಿ ಇರಬಹುದಾದ್ದರಿಂದ ಅವನ ಬಂಧನಕಾರ್ಯಕ್ಕೆ ಇನ್ನೂ ಹೆಚ್ಚಿನ ಸಮಯ ಬೇಕಾಗಬಹುದು. ವಿವಿಧ ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿರುವ ಅವನ ಬಹುತೇಕ ಸಹಚರರನ್ನು ಈಗಾಗಲೇ ಬಂಧಿಸಿರುವುದು ಈ ಕೆಲಸದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಲಾಗಿದೆ ಎಂದು ಹೇಳಬಹುದು. ಈ ವಿಚಾರದಲ್ಲಿ ಸರ್ಕಾರ ಈಗಾಗಲೇ ಹೆಚ್ಚಿನ ಯಶಸ್ಸಿ ಸಾಧಿಸಿದ್ದು ಉಳಿದಿರುವ ಕೆಲಸವನ್ನು ಎಷ್ಟು ಬೇಗ ಸಾಧ್ಯವೋ ಅಷ್ಟರೊಳಗೆ ಮುಗಿಸಲಿದೆ.

ಕಾವೇರಿ ಪ್ರವಾಹದಿಂದ ಹಾನಿ

2321 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾವೇರಿ ಪ್ರವಾಹದಿಂದ ಉಂಟಾಗಿರುವ ಹಾನಿ ಎಷ್ಟು?

ಆ) ಪ್ರವಾಹದಿಂದ ತೊಂದರೆಗೆ ಸಿಲುಕಿರುವ ಸಂತ್ರಸ್ಥರಿಗೆ ಸರ್ಕಾರವು ಕೈಗೊಂಡಿರುವ ಪರಿಹಾರ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ರೂಪಾಯಿ 637.28 ಲಕ್ಷ.

ಆ) 1) ಮಡಿದವರ ಅರ್ಹ ಕುಟುಂಬದವರಿಗೆ ಸಹಾನುಭೂತಿ ಪರಿಹಾರ.

2) ಬಡ ಕುಟುಂಬಗಳ ಮನೆ ಹಾನಿ ದುರಸ್ತಿ ಪರಿಹಾರ.

3) ಜಾನುವಾರು ಪರಿಹಾರ.

4) ಉಚಿತ ಕೃಷಿ ಬೀಲ ವಿತರಣೆ.

5) ಸಣ್ಣ ಮತ್ತು ಅತೀ ಸಣ್ಣ ರೈತರ ಹಾನಿಗೀಡಾದ ಕೃಷಿ ಜಮೀನು ಅಭಿವೃದ್ಧಿ ಪರಿಹಾರ.

6) ಫಿಷ್ ಫಾರಂ ದುರಸ್ತಿ.

ಬೆಂಗಳೂರು ಉತ್ತರ ತಾಲ್ಲೂಕ್ ದಾಸನಪುರ ಹೋಬಳಿ ಗಿಡ್ಡೇನಹಳ್ಳಿ ಗ್ರಾಮದ ಸರ್ವೇನಂ. 80ರ ಗೋಮಾಳ ಭೂಮಿಯ ಬಗ್ಗೆ

2323 - ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿ ಗಿಡ್ಡೇನಹಳ್ಳಿ ಗ್ರಾಮದ ಸರ್ವೆ ನಂ.80ರ ವಿಸ್ತೀರ್ಣವೆಷ್ಟು. ಇದು ಸರ್ಕಾರಿ ಗೋಮಾಳವೇ?

ಆ) ಈ ಗೋಮಾಳ ಭೂಮಿಯನ್ನು ಸರ್ಕಾರ ಯಾರಿಗಾದರೂ ಮಂಜೂರು ಮಾಡಿದ್ದರೆ ವಿವರಗಳನ್ನು ಒದಗಿಸುವುದು, ಇದರಲ್ಲಿ ಅಕ್ರಮ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದರೆ ಸರ್ಕಾರ ಇದರ ಬಗ್ಗೆ ಕ್ರಮ ಕೈಗೊಂಡು ಗ್ರಾಮದ ಬಡ ಜನರಿಗೆ ಈ ಭೂಮಿಯನ್ನು ಹಂಚುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಹೌದು. ಇದು 200 ಎಕರೆ 39 ಗುಂಟೆ ವಿಸ್ತೀರ್ಣವುಳ್ಳ ಗೋಮಾಳ ಜಮೀನಾಗಿರುತ್ತದೆ.

ಆ) ಮೇಲಿನ ಒಟ್ಟು 200 ಎಕರೆ 39 ಗುಂಟೆ ಜಮೀನಿನ ಪೈಕಿ, 74 ಎಕರೆ 23 ಗುಂಟೆ ಜಮೀನನ್ನು ಇನಾಂ ವಿಶೇಷ ಜಿಲ್ಲಾಧಿಕಾರಿಗಳು, ಕರ್ನಾಟಕ ಇನಾಂ ರದ್ದತಿ ಕಾಯಿದೆ ಪ್ರಕಾರ 15 ಜನರಿಗೆ ಒಡೆತನವನ್ನು ನೀಡಿರುತ್ತಾರೆ. ಉಳಿಕೆ ಜಮೀನನ್ನು ಯಾರಿಗೂ ಮಂಜೂರು ಮಾಡಿರುವುದಿಲ್ಲವಾದ್ದರಿಂದ, ಇದರಲ್ಲಿ ಅಕ್ರಮದ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ ಚುಂಚನಗುಪ್ಪೆ ಗ್ರಾಮದ ಸರ್ವೆ ನಂ.16ರ ಬಗ್ಗೆ

2324 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ತಾವರೆಕೆರೆ ಹೋಬಳಿ ಚುಂಚನಗುಪ್ಪೆ ಗ್ರಾಮದ ಸರ್ವೆ ನಂ. 16ರ ವಿಸ್ತೀರ್ಣ ಎಷ್ಟು , ಇದು ಸರ್ಕಾರಿ ಗೋಮಾಳವೇ?

ಆ) ಈ ಗೋಮಾಳ ಜಮೀನನ್ನು ಬಡ ರೈತರಿಗೆ ವಿತರಿಸುವ ಆಲೋಚನೆ ಸರ್ಕಾರದ ಮುಂದೆ ಇದೆಯೇ ಇಲ್ಲದಿದ್ದಲ್ಲಿ ಕಾರಣವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಹೌದು. ಇದು ಸರ್ಕಾರಿ ಗೋಮಾಳವಾಗಿದ್ದು, ಒಟ್ಟು 214 ಎಕರೆ 14 ಗುಂಟೆಗಳಿರುತ್ತದೆ.

ಆ) ಈ ಹಿಂದೆ ಇದರಲ್ಲಿ 100 ಎಕರೆ ಜಮೀನನ್ನು 25 ಜನರಿಗೆ ಮಂಜೂರು ಮಾಡಲಾಗಿರುತ್ತದೆ. ಉಳಿದ 114 ಎಕರೆ 14 ಗುಂಟೆ ಜಮೀನು ಅಕ್ರಮ ಸಾಗುವಳಿಗೆ ಒಳಪಟ್ಟಿರುತ್ತದೆ. ಕರ್ನಾಟಕ ಭೂ ಕಂದಾಯ ನಿಯಮಗಳು 1964ರ ಕಲಂ 94ಎ ಯಂತೆ ಬೆಂಗಳೂರು ನಗರ ಪಾಲಿಕೆಯ ಸರಹದ್ದಿನಿಂದ 18 ಕಿ.ಮೀ. ಒಳಗಿನ ಜಮೀನನ್ನು ಸಕ್ರಮಗೊಳಿಸಲು ಪ್ರಸ್ತುತ ಅವಕಾಶವಿರುವುದಿಲ್ಲ.

ಕೃಷಿ ಇಲಾಖೆಯಿಂದ ಸಬ್ಸಿಡಿ ಉಪಕರಣಗಳು

2306 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಇಲಾಖೆಯಿಂದ ಸಬ್ಸಿಡಿ ಯೋಜನೆಯಡಿ ಕೊಡುವ ಉಪಕರಣಗಳು ಸಬ್ಸಿಡಿ ನೀಡಿದ ನಂತರವೂ ಹೆಚ್ಚು ಕಡಿಮೆ ಮಾರುಕಟ್ಟೆ ಧಾರಣೆಗಳಿಗೆ ಲಭ್ಯವಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಯೋಜನೆ ಬದಲಾಗಿ ಸರಕಾರ ಉಪಕರಣಕ್ಕೆ ಬೇಕಾಗುವ ಕಬ್ಬಿಣ ಮತ್ತು ಕಟ್ಟಗೆ ಕಡಿಮೆ ದರಗಳಲ್ಲಿ ಒದಗಿಸಲು ಯೋಚಿಸುವುದೇ?

ಶ್ರೀ ಎನ್.ಚಿಕ್ಕೇಗೌಡ (ಕೃಷಿ ಸಚಿವರು) :

ಅ) ಇಲ್ಲ

ಆ) ಈ ವಿಷಯವು ಸರಕಾರದ ಪರಿಶೀಲನೆಯಲ್ಲಿ ಇಲ್ಲ.